ತೆಗೆದುಕೊಂಡು ಹೋಗುತ್ತಿರುವ ತಿಂಡಿ–ತಿನಿಸುಗಳ ಪರಿಮಳ ನನ್ನ ಮೂಗಿಗೆ ಬಡಿಯುತ್ತಿದೆ. ನನಗೆ ಹಸಿವಾಗಿದೆ. ಅದರಲ್ಲಿ ಸ್ವಲ್ಪ ನನಗೆ ಕೊಟ್ಟು ಮುಂದೆ ಹೋಗು' ಎಂದಿತು.

ಅದರಿಂದ ಸಂತಸಗೊಂಡ ಮುದುಕಿ ತಾನು ತಂದಿದ್ದ ಸ್ವಲ್ಪ ತಿಂಡಿತಿನಿಸುಗಳನ್ನು ಕಿಟಕಿಯಿಂದಲೇ ಹುಲಿರಾಯನಿಗೆ ನೀಡಿ ಮುಂದೆ ಹೊರಡಲು ಹುಲಿರಾಯನಿಂದ ಅನುಮತಿ ಪಡೆದು ಕುಂಬಳವನ್ನು ಕುರಿತು 'ನಡೀ ಕುಂಬಳವೇ ಭರ ಭರ' ಎಂದಳು. ತಕ್ಷಣವೇ ಗುಡು ಗುಡು ಎಂದು ಶಬ್ದ ಮಾಡಿಕೊಂಡು ಕುಂಬಳಕಾಯಿ ಮುಂದೆ ಉರುಳುತ್ತಾ ಹೊರಟಿತು.

ಇದೇ ರೀತಿ ಕಾಡಿನಲ್ಲಿ ಅವಳು ಹೋಗುವ ದಾರಿಯಲ್ಲಿ ಅಡ್ಡವಾಗಿ ಬಹಳಷ್ಟು ಪ್ರಾಣಿಗಳು ಬಂದು ನಿಂತವು. ಹುಲಿರಾಯನಂತೆ ಅವುಗಳೂ ಮುದುಕಿಯಿಂದ ತಿಂಡಿ ತಿನಸುಗಳನ್ನು ಪಡೆದು ಅವಳನ್ನು ಹಾರೈಸಿ ಮುಂದೆ ಹೋಗಲು ಅನುಮತಿ ಕೊಟ್ಟವು. ಪ್ರತಿಯೊಂದು ಪ್ರಾಣಿಯಿಂದಲೂ ಬೀಳ್ಕೊಳ್ಳುವಾಗಲೂ ಮುದುಕಿ ಕುಂಬಳಕಾಯಿಗೆ ಮುಂದೆ ಹೋಗಲು 'ನಡೀ ಕುಂಬಳವೇ ಭರ ಭರ' ಎಂದು ಹೇಳುತ್ತಿದ್ದಳು. ಅದು 'ಗುಡು ಗುಡು' ಶಬ್ದ ಮಾಡಿಕೊಂಡು ಮುಂದೆ ಸಾಗುತ್ತಿತ್ತು. ಕಟ್ಟ ಕಡೆಗೆ ಮಗಳಿರುವ ಊರಿಗೆ ಬಂದು ಅವಳ ಮನೆಯ ಮುಂದೆ ಬಂದು ನಿಂತಿತು.

ಮನೆಯ ಮುಂದೆ ನಿಂತ ದೊಡ್ಡ ಕುಂಬಳಕಾಯಿಯನ್ನು ಊರ ಜನರೆಲ್ಲಾ ಅಚ್ಚರಿಗೊಂಡು ನೋಡುತ್ತಿದ್ದಂತೆ ಅದರೊಳಗಿಂತ ಇಳಿದ ಮುದಕಿಯನ್ನು ನೋಡಿ ಸಂತಸಪಟ್ಟರು. ಮಗಳು, ಮೊಮ್ಮಕ್ಕಳು, ಅಳಿಯನನ್ನು ಕಂಡು ಮುದುಕಿಗೆ ಕಣ್ಣು ತುಂಬಿಬಂದಿತು. ಅದೇ ರೀತಿ ಅವರು ಮುದುಕಿಯನ್ನು ಕಂಡು ಹಿಗ್ಗಿದರು. ಅವಳು ತಂದ ತಿಂಡಿ– ತಿನಿಸು, ಹಣ್ಣು–ಹಂಪಲು, ತರಕಾರಿಗಳನ್ನು ತಿಂದು ಖುಷಿಪಟ್ಟರು.

ಮುಂದೆ ಅಜ್ಜಿ ಹಲವಾರು ದಿನಗಳು ಮೊಮ್ಮಕ್ಕಳೊಂದಿಗೆ ಇದ್ದು ಸಂತೋಷದಿಂದ ತೃಪ್ತಳಾಗಿ ನಂತರ ಅದೇ ಕುಂಬಳಕಾಯಿಯೊಳಗೆ ಕುಳಿತು 'ನಡೀ ಕುಂಬಳವೇ ಭರ ಬರ' ಎನ್ನಲು ಅದು 'ಗುಡು ಗುಡು' ಶಬ್ದ ಮಾಡಿಕೊಂಡು ಮುಂದೆ ಉರುಳಿತು. ಮುದುಕಿಯ ಪ್ರೀತಿಯ ಕಾಡಿನ ಗುಡಿಸಿಲಿನತ್ತ ಹೊರಟಿತು.

ಸಮಯೋಚಿತವಾಗಿ ಬುದ್ಧಿ ಉಪಯೋಗಿಸಿ ಆ ದಟ್ಟ ಕಾಡಿನಿಂದ ತನ್ನನ್ನು ತಾನೇ ರಕ್ಷಿಸಿಕೊಂಡು ಊರಿಗೆ ಹೋಗಿ ವಾಪಸ್ಸು ಗುಡಿಸಿಲಿಗೆ ಬಂದ ಮುದುಕಿ ನಿಜಕ್ಕೂ ಜಾಣೆ ಹಾಗೂ ಧೈರ್ಯವಂತೆ.

**(ಸಂಗ್ರಹ) ಪುಷ್ಪ ಶೇಖರ್,**
**ಬೆಂಗಳೂರು**



# ಗುಬ್ಬಕ್ಕನಿಗೆ ಮಂಗಣ್ಣನ ನೆರವು

ಹಸಿರಿನ ಬನದೊಳು ಬೆಚ್ಚನೆ ಗೂಡಲಿ
ಬದುಕುತಲಿದ್ದಳು ಗುಬ್ಬಕ್ಕ
ಸುಂದರ ಬದುಕಿನ ಆಸೆಯ ಹೊತ್ತು
ದಿನಗಳ ದೂಡುತ ಕೇಳಕ್ಕ

ದಿನಗಳು ತುಂಬಲು ಮೊಟ್ಟೆಗಳಿಟ್ಟು
ಕೂಡಿಸಿ ಇಟ್ಟಳು ಜೋಪಾನ
ಮುದ್ದಿನ ಮರಿಗಳು ಹೊರಬರಲೆಂದು
ಕೊಡುತಲಿ ನಡೆದಳು ಕಾವನ್ನ

ಕೆಲದಿನ ಕಳೆಯಲು ಮೊಟ್ಟೆಗಳೊಡೆದು
ಹೊರಗಡೆ ಬಂದವು ಮರಿಹಕ್ಕಿ
ಅಮ್ಮನು ಕೊಡುತಿಹ ಗುಟುಕನು ಸವಿದು
ಬೆಳೆಯುತ ನಡೆದವು ಗುಬ್ಬಕ್ಕಿ

ಮುದ್ದಿನ ಮರಿಗಳ ಗೂಡಲಿ ಬಿಟ್ಟು
ಹುಡುಕುತ ಕಾಳನು ಗುಬ್ಬಕ್ಕ
ಹೋದಾ ಸಮಯದಿ ಬಿರುಸಲಿ ಮಳೆಯು
ಶುರುವನು ಹಚ್ಚಿತು ಆಗಕ್ಕ

ಮಳೆಯಾ ಜೊತೆಯಲಿ ಜೋರಲಿ ಗಾಳಿ
ಬೀಸಲು ತೊಡಗಿತು ಕಾಡಲ್ಲಿ
ಗಾಳಿಯ ರಭಸಕೆ ಗೂಡದು ಕಳಚಿ
ಬಿದ್ದಿತು ಹರಿಯುವ ನೀರಲ್ಲಿ

ಹರಿಯುವ ನೀರೊಳು ತೇಲುತ ಹೊರಟ
ಗೂಡಲಿ ಇರುವಾ ಗುಬ್ಬಕ್ಕಿ
ಗಾಬರಿಯಿಂದ ಅರಚುತಲಿದ್ದವು
ಅಮ್ಮನ ನೆನೆಯುತ ಮರಿಹಕ್ಕಿ

ಗುಬ್ಬಿಯ ಮರಿಗಳು ಚೀರುತಲಿರುವ
ಸದ್ದನು ಕೇಳಿದ ಮಂಗಣ್ಣ
ತಡವನು ಮಾಡದೆ ತಕ್ಷಣ ನೆಗೆದು
ಪಡೆದನು ತೇಲುವ ಗೂಡನ್ನ

ಹೊರಗಡೆ ತೋಯ್ದರು ಗೂಡಿನ ಒಳಗೆ
ಬೆಚ್ಚಗೆ ಇದ್ದವು ಗುಬ್ಬಕ್ಕಿ
ಸಂತಸಪಟ್ಟಗೊಂಡ ಮಂಗಣ್ಣ ಗೂಡನು
ಹೊತ್ತು ಕುಳಿತನು ಮಡಿಲಲ್ಲಿ

ಮಳೆಯ ಅಬ್ಬರ ಗಾಳಿಯ ಆರ್ಭಟ
ನಿಲ್ಲಲು ಬಂದಳು ಗುಬ್ಬಕ್ಕ
ಮರದಲಿ ಗೂಡದು ಕಾಣದೆಯಿರಲು
ಹುಡುಕುತ ನಡೆದಳು ಅತ್ತಿತ್ತ

ಕರುಳಿನ ಕೂಗನು ಕೇಳಿದ ಮರಿಗಳು
ಗೂಡಲಿ ಚಿಲಿಪಿಲಿಗುಟ್ಟಿದವು
ಮುದ್ದಿನ ಮರಿಗಳು ಉಲಿಯುವ ದನಿಗಳು
ಅಮ್ಮನ ಹೃದಯವ ತಟ್ಟಿದವು

ಮರಿಗಳು ಕೂಗುವ ಜಾಡನು ಹಿಡಿದು
ಹತ್ತಿರ ಬರಲು ಗುಬ್ಬಕ್ಕ
ಮೆಲ್ಲನೆ ಗೂಡನು ಹೊತ್ತು ಒಯ್ದು
ಮರದಲಿ ಇಟ್ಟನು ಮಂಗಣ್ಣ

ಮರಿಗಳ ಕಾಣುವ ಆತುರದಿಂದ
ಗೂಡಿನ ಹತ್ತಿರ ಗುಬ್ಬಕ್ಕ
ಹೋದಳು ಬೇಗನೆ ಕಂಡು ಮರಿಗಳ
ತಬ್ಬಿ ಕೊಟ್ಟಳು ಮುತ್ತಕ್ಕ

ಮುದ್ದಿನ ಮರಿಗಳ ಜೀವವ ಉಳಿಸಿ
ಘನತೆಯ ಮೆರೆದನು ಮಂಗಣ್ಣ
ಅಕ್ಕರಯಿಂದಲಿ ನೆನೆಯುತ ನಡೆದಳು
ಮಂಗಣ್ಣನನ್ನು ಗುಬ್ಬಕ್ಕ

**–ಸೋಮಲಿಂಗ ಬೇಡರ,**
**ಆಲೂರ**